**Re.No. D. 221**

भारत का राजपत्र
The Gazette of India

# ಭಾರತ ರಾಜಪತ್ರ

**(Extraordinary)**
(ವಿಶೇಷ ಸಂಚಿಕೆ)

| | |
|---|---|
| **भाग IX** | **अनुभाग 1** |
| **PART IX** | **SECTION 1** |
| **ಭಾಗ IX** | **ವಿಭಾಗ 1** |

प्राधिकार से प्रकाशित
**Published by Authority**
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ

| | | |
|---|---|---|
| सं 1, नई दिल्ली, बुधवार, 07 जून, 2023 | ज्येष्ठ 19, 1945 (शक) | खंड.54 |
| No.1, New Delhi, Wednesday, June 07, 2023 | Jyeshtha 19, 1945 (saka) | Vol. 54 |
| ನಂ.1, ನವದೆಹಲಿ, ಬುಧವಾರ, ಜೂನ್ 07, 2023 | ಜ್ಯೇಷ್ಠ 19, 1945 (ಶಕ) | ಸಂಪುಟ.54 |


**Ministry of Law and Justice**
(Legislative Department)
New Delhi, 07th June, 2023

**ಕಾನೂನು ಮತ್ತು ನ್ಯಾಯ ಮಂತ್ರಾಲಯ**

**(ವಿಧಾಯೀ ಇಲಾಖೆ)**

**ನವದೆಹಲಿ, 07ನೇ ಜೂನ್, 2023**

The Translation in Kannada of the following Acts, namely:- (1) THE CENTRAL GOODS AND SERVICES TAX ACT, 2017 (No. 12 of 2017) (2) THE GOODS AND SERVICES TAX (COMPENSATION TO STATES) ACT, 2017 (No. 15 of 2017) (3) THE ESSENTIAL DEFENCE SERVICES ACT, 2021 (No. 25 of 2021) -are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ:– (1) ಕೇಂದ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಸಂಖ್ಯೆ 12) (2) ಸರಕುಗಳ ಮತ್ತು ಸೇವೆಗಳ ತೆರಿಗೆ (ರಾಜ್ಯಗಳಿಗೆ ನಷ್ಟಪರಿಹಾರ) ಅಧಿನಿಯಮ, 2017 (2017 ರ ಸಂಖ್ಯೆ 15) (3) ಅತ್ಯಾವಶ್ಯಕ ರಕ್ಷಣಾ ಸೇವೆಗಳ ಅಧಿನಿಯಮ, 2021 (2021ರ ಸಂಖ್ಯೆ 25) – ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

## ಸರಕುಗಳ ಮತ್ತು ಸೇವೆಗಳ ತೆರಿಗೆ (ರಾಜ್ಯಗಳಿಗೆ ನಷ್ಟಪರಿಹಾರ) ಅಧಿನಿಯಮ, 2017

## (2017ರ ಸಂಖ್ಯೆ 15)

[12ನೇ ಏಪ್ರಿಲ್, 2017.]

ಸಂವಿಧಾನ (ನೂರಾ ಒಂದನೆಯ ತಿದ್ದುಪಡಿ) ಅಧಿನಿಯಮ, 2016ರ ಉಪಬಂಧಗಳಿಗೆ ಅನುಸಾರವಾಗಿ ಸರಕುಗಳ ಮತ್ತು ಸೇವೆಗಳ ತೆರಿಗೆಯನ್ನು ಅನುಷ್ಠಾನಗೊಳಿಸುವುದರಿಂದಾಗಿ ರಾಜಸ್ವದಲ್ಲಿ ಉಂಟಾಗುವ ನಷ್ಟಕ್ಕೆ ಪ್ರತಿಯಾಗಿ ರಾಜ್ಯಗಳಿಗೆ ನಷ್ಟಪರಿಹಾರ ನೀಡುವುದಕ್ಕೆ ಉಪಬಂಧ ಕಲ್ಪಿಸಲು ಅಧಿನಿಯಮ.

ಇದು ಭಾರತ ಗಣರಾಜ್ಯದ ಅರವತ್ತೆಂಟನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಸರಕುಗಳ ಮತ್ತು ಸೇವೆಗಳ ತೆರಿಗೆ (ರಾಜ್ಯಗಳಿಗೆ ನಷ್ಟಪರಿಹಾರ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ *ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** (1) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಕೇಂದ್ರ ತೆರಿಗೆ" ಎಂದರೆ, ಕೇಂದ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಮೇರೆಗೆ ವಿಧಿಸಿದ ಮತ್ತು ಸಂಗ್ರಹಿಸಿದ ತೆರಿಗೆ;

(ಬಿ) "ಕೇಂದ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮ" ಎಂದರೆ, ಕೇಂದ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ 12);

(ಸಿ) "ಉಪಕರ" ಎಂದರೆ, ಪ್ರಕರಣ 8ರ ಮೇರೆಗೆ ವಿಧಿಸಿದ ಸರಕುಗಳ ಮತ್ತು ಸೇವೆಗಳ ತೆರಿಗೆ ನಷ್ಟಪರಿಹಾರದ ಉಪಕರ;

(ಡಿ) "ನಷ್ಟಪರಿಹಾರ" ಎಂದರೆ, ಸರಕುಗಳ ಮತ್ತು ಸೇವೆಗಳ ತೆರಿಗೆ ನಷ್ಟಪರಿಹಾರ ರೂಪದ ಪ್ರಕರಣ 7ರ ಮೇರೆಗೆ ನಿರ್ಧರಿಸಿದ ಮೊಬಲಗು;

(ಇ) "ಪರಿಷತ್ತು" ಎಂದರೆ, ಸಂವಿಧಾನದ ಅನುಚ್ಛೇದ 279ಎ ಉಪಬಂಧಗಳ ಮೇರೆಗೆ ರಚಿಸಿದ ಸರಕುಗಳ ಮತ್ತು ಸೇವೆಗಳ ತೆರಿಗೆ ಪರಿಷತ್ತು;

(ಎಫ್) "ನಿಧಿ" ಎಂದರೆ, ಪ್ರಕರಣ 10ರಲ್ಲಿ ಉಲ್ಲೇಖಿಸಿದ ಸರಕು ಮತ್ತು ಸೇವಾ ತೆರಿಗೆಯ ನಷ್ಟಪರಿಹಾರದ ನಿಧಿ;

(ಜಿ) ತೆರಿಗೆದಾಯಕ ವ್ಯಕ್ತಿಗೆ ಸಂಬಂಧಿಸಿದಂತೆ, "ಇನ್‌ಪುಟ್ ಟ್ಯಾಕ್ಸ್" ಎಂದರೆ:–

* ಜುಲೈ 01, 2017 ರಂದು ಜಾರಿಗೆ ಬಂದಿದೆ: ಅಧಿಸೂಚನೆ ಸಂಖ್ಯೆ ಜಿಎಸ್‌ಆರ್ 700(ಇ), ದಿನಾಂಕ: ಜೂನ್ 28, 2017. ಭಾರತ ರಾಜಪತ್ರ, ಅಸಾಧಾರಣ, ಭಾಗ–II, ವಿಭಾಗ 3 (i) ನೋಡಿ.

(i) ಆ ವ್ಯಕ್ತಿಗೆ, ಸರಕುಗಳ ಅಥವಾ ಸೇವೆಗಳ ಅಥವಾ ಇವುಗಳೆರಡನ್ನೂ ಪೂರೈಕೆ ಮಾಡಿದ್ದಕ್ಕಾಗಿ ಆ ಸೇವೆಗಳ ಮೇಲೆ ವಿಧಿಸಿದ ಉಪಕರ;

(ii) ಸರಕುಗಳ ಆಮದಿನ ಮೇಲೆ ವಿಧಿಸಿದ ಉಪಕರ ಮತ್ತು ರಿವರ್ಸ್ ಚಾರ್ಜ್ ಆಧಾರದ ಮೇಲೆ ಸಂದಾಯ ಮಾಡಬಹುದಾದ ಉಪಕರವನ್ನು ಒಳಗೊಳ್ಳುತ್ತದೆ;

(ಹೆಚ್) "ಏಕೀಕೃತ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮ" ಎಂದರೆ, ಏಕೀಕೃತ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ 13);

(ಐ) "ಏಕೀಕೃತ ತೆರಿಗೆ" ಎಂದರೆ, ಏಕೀಕೃತ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಮೇರೆಗೆ ವಿಧಿಸಿದ ಮತ್ತು ಸಂಗ್ರಹಿಸಿದ ಏಕೀಕೃತ ಸರಕುಗಳ ಮತ್ತು ಸೇವೆಗಳ ತೆರಿಗೆ;

(ಜೆ) "ನಿಯಮಿಸಿದ" ಎಂದರೆ, ಈ ಅಧಿನಿಯಮದ ಮೇರೆಗೆ ಪರಿಷತ್ತಿನ ಶಿಫಾರಸ್ಸುಗಳ ಅನ್ವಯ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಕೆ) "ಬೆಳವಣಿಗೆ ಮುನ್ನಂದಾಜು ದರ" ಎಂದರೆ, ಪ್ರಕರಣ 3ಕ್ಕೆ ಅನುಸಾರವಾಗಿ ಪರಿವರ್ತನೆ ಅವಧಿಗಾಗಿ ಮುನ್ನಂದಾಜು ಮಾಡಿದ ಬೆಳವಣಿಗೆ ದರ;

(ಎಲ್) "ಅನುಸೂಚಿ" ಎಂದರೆ, ಈ ಅಧಿನಿಯಮಕ್ಕೆ ಅನುಬಂಧಿಸಲಾಗಿರುವ ಅನುಸೂಚಿ;

(ಎಂ) "ರಾಜ್ಯ" ಎಂದರೆ:–

(i) ಪ್ರಕರಣ 3, 4, 5, 6 ಮತ್ತು 7ರ ಉದ್ದೇಶಗಳಿಗಾಗಿ, ಕೇಂದ್ರ ಸರಕುಗಳು ಮತ್ತು ಸೇವೆಗಳ ತೆರಿಗೆ ಅಧಿನಿಯಮದಲ್ಲಿ ಪರಿಭಾಷಿಸಿರುವ ರಾಜ್ಯಗಳು; ಮತ್ತು

(ii) ಪ್ರಕರಣ 8, 9, 10, 11, 12, 13 ಮತ್ತು 14ರ ಉದ್ದೇಶಗಳಿಗಾಗಿ, ಕೇಂದ್ರ ಸರಕುಗಳು ಮತ್ತು ಸೇವೆಗಳ ತೆರಿಗೆ ಅಧಿನಿಯಮದಲ್ಲಿ ಪರಿಭಾಷಿಸಿರುವ ರಾಜ್ಯಗಳು ಮತ್ತು ಒಕ್ಕೂಟ ರಾಜ್ಯಕ್ಷೇತ್ರಗಳ ಸರಕುಗಳು ಮತ್ತು ಸೇವೆಗಳ ತೆರಿಗೆ ಅಧಿನಿಯಮದಲ್ಲಿ ಪರಿಭಾಷಿಸಿರುವ ಒಕ್ಕೂಟ ರಾಜ್ಯಕ್ಷೇತ್ರಗಳು;

(ಎನ್) "ರಾಜ್ಯ ತೆರಿಗೆ" ಎಂದರೆ, ಸಂಬಂಧಪಟ್ಟ ರಾಜ್ಯ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಮೇರೆಗೆ ವಿಧಿಸಿದ ಮತ್ತು ಸಂಗ್ರಹಿಸಿದ ತೆರಿಗೆ;

(ಓ) "ರಾಜ್ಯ ಸರಕುಗಳು ಮತ್ತು ಸೇವೆಗಳ ತೆರಿಗೆ ಅಧಿನಿಯಮ" ಎಂದರೆ, ಸಂಬಂಧಪಟ್ಟ ರಾಜ್ಯವು ಸರಕುಗಳ ಅಥವಾ ಸೇವೆಗಳ ಅಥವಾ ಇವುಗಳೆರಡರ ಪೂರೈಕೆ ಮೇಲೆ ತೆರಿಗೆ ವಿಧಿಸುವುದಕ್ಕಾಗಿ ಮತ್ತು ಸಂಗ್ರಹಿಸುವುದಕ್ಕಾಗಿ ರಾಜ್ಯ ವಿಧಾನಮಂಡಲವು ರಚಿಸಬಹುದಾದ ಕಾನೂನು;

(ಪಿ) "ತೆರಿಗೆದಾಯಕ ಪೂರೈಕೆ" ಎಂದರೆ, ಸರಕುಗಳ ಅಥವಾ ಸೇವೆಗಳ ಅಥವಾ ಇವುಗಳೆರಡರ ಪೂರೈಕೆ ಮೇಲೆ ಈ ಅಧಿನಿಯಮದ ಮೇರೆಗೆ ಉಪಕರವನ್ನು ವಿಧಿಸಬಹುದಾಗಿದೆಯೋ ಅಂಥ ತೆರಿಗೆದಾಯಕ ಪೂರೈಕೆ;

(ಕ್ಯೂ) ಯಾವುದೇ ರಾಜ್ಯಕ್ಕೆ ಸಂಬಂಧಿಸಿದಂತೆ, "ಪರಿವರ್ತನೆ ದಿನಾಂಕ" ಎಂದರೆ, ಆಯಾಯ ರಾಜ್ಯದಲ್ಲಿ ರಾಜ್ಯ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮವು ಜಾರಿಗೆ ಬರುವಂಥ ದಿನಾಂಕ;

(ಆರ್) "ಪರಿವರ್ತನೆ ಅವಧಿ" ಎಂದರೆ, ಪರಿವರ್ತನೆ ದಿನಾಂಕದಿಂದ ಐದು ವರ್ಷಗಳ ಅವಧಿ; ಮತ್ತು

(ಎಸ್) "ಒಕ್ಕೂಟ ರಾಜ್ಯಕ್ಷೇತ್ರಗಳ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮ" ಎಂದರೆ, ಒಕ್ಕೂಟ ರಾಜ್ಯಕ್ಷೇತ್ರಗಳ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ 14).

(2) ಈ ಅಧಿನಿಯಮದಲ್ಲಿ ಬಳಸಿರುವ ಆದರೆ ಪರಿಭಾಷಿಸಿರದ ಪದಗಳನ್ನು ಮತ್ತು ಪದಾವಳಿಯನ್ನು ಕೇಂದ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದಲ್ಲಿ ಹಾಗೂ ಏಕೀಕೃತ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದಲ್ಲಿ ಬಳಸಿದ್ದರೆ ಮತ್ತು ಪರಿಭಾಷಿಸಿದ್ದರೆ ಈ ಅಧಿನಿಯಮದಲ್ಲಿ ಅವೇ ಅರ್ಥಗಳನ್ನು ಹೊಂದಿರತಕ್ಕದ್ದು.

**3. ಬೆಳವಣಿಗೆ ಮುನ್ನಂದಾಜು ದರ.–** ಪರಿವರ್ತನೆ ಅವಧಿಯಲ್ಲಿ ರಾಜ್ಯಕ್ಕೆ ಸೇರಿ ಹೋಗಿರುವ ರಾಜಸ್ವದ ನಾಮಮಾತ್ರದ ಬೆಳವಣಿಗೆ ಮುನ್ನಂದಾಜು ದರವು ಒಂದು ವರ್ಷಕ್ಕೆ ಶೇ. ಹದಿನಾಲ್ಕರಷ್ಟಿರತಕ್ಕದ್ದು.

**4. ಆಧಾರ ವರ್ಷ.–** ಪರಿವರ್ತನೆ ಅವಧಿಯ ಯಾವುದೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡಬೇಕಾದ ನಷ್ಟಪರಿಹಾರದ ಮೊಬಲಗನ್ನು ಲೆಕ್ಕಹಾಕುವ ಉದ್ದೇಶಕ್ಕಾಗಿ, 2016ರ ಮಾರ್ಚ್, 31ರಂದು ಮುಕ್ತಾಯವಾಗುವ ಹಣಕಾಸು ವರ್ಷವನ್ನು ಆಧಾರ ವರ್ಷವನ್ನಾಗಿ ಗಣನೆಗೆ ತೆಗೆದುಕೊಳ್ಳತಕ್ಕದ್ದು.

**5. ಆಧಾರ ವರ್ಷದ ರಾಜಸ್ವ.–** (1) ಉಪಪ್ರಕರಣಗಳು (2), (3), (4), (5) ಮತ್ತು (6)ರ ಉಪಬಂಧಕ್ಕೊಳಪಟ್ಟು, ಆಧಾರ ವರ್ಷದಲ್ಲಿ ರಾಜ್ಯದ ರಾಜಸ್ವವು ಯಾವುದೆಂದರೆ ಆಯಾಯ ರಾಜ್ಯವು ಅಥವಾ ಒಕ್ಕೂಟವು ವಿಧಿಸಿದ ತೆರಿಗೆಗಳಿಂದಾಗಿ, ಆಧಾರ ವರ್ಷದ ಅವಧಿಯಲ್ಲಿ ರಾಜ್ಯವು ಮತ್ತು ಸ್ಥಳೀಯ ಸಂಸ್ಥೆಗಳು ಸಂಗ್ರಹಿಸಿದ ಮೊತ್ತ ಮತ್ತು ಆಯಾಯ ರಾಜ್ಯವು ಅಥವಾ ಒಕ್ಕೂಟವು ವಿಧಿಸಿದ ಈ ಕೆಳಕಂಡ ಯಾವ ತೆರಿಗೆಗಳು ಸರಕುಗಳ ಮತ್ತು ಸೇವೆಯಲ್ಲಿ ಸೇರಿ ಹೋಗಿರುವವೋ ಆ ತೆರಿಗೆಗಳಿಗೆ ಸಂಬಂಧಿಸಿದ ಮರುಪಾವತಿಗಳ ನಿವ್ವಳ ಮೊತ್ತ, ಎಂದರೆ:–

(ಎ) ಸಂವಿಧಾನದ ಏಳನೆಯ ಅನುಸೂಚಿಯ ಪಟ್ಟಿ–II ರಲ್ಲಿ (ರಾಜ್ಯ ಪಟ್ಟಿಯಲ್ಲಿ) ಈ ಹಿಂದೆ ಇದ್ದ ನಮೂದು 54ರಂತೆ ಸಂಬಂಧಪಟ್ಟ ರಾಜ್ಯವು ವಿಧಿಸಿದ ಮೌಲ್ಯವರ್ಧಿತ ತೆರಿಗೆಯು, ಮಾರಾಟ ತೆರಿಗೆಯು, ಖರೀದಿ ತೆರಿಗೆಯು, ಕರಾರು ಕಾಮಗಾರಿಗಳ ಮೇಲೆ ಸಂಗ್ರಹಿಸಿದ ತೆರಿಗೆಯು ಅಥವಾ ಇತರ ಯಾವುದೇ ತೆರಿಗೆ;

(ಬಿ) ಕೇಂದ್ರ ಮಾರಾಟ ತೆರಿಗೆ ಅಧಿನಿಯಮ, 1956 (1956ರ 74)ರ ಮೇರೆಗೆ ವಿಧಿಸಿದ ಕೇಂದ್ರ ಮಾರಾಟ ತೆರಿಗೆ;

(ಸಿ) ಸಂವಿಧಾನದ ಏಳನೆಯ ಅನುಸೂಚಿಯ ಪಟ್ಟಿ–II ರ (ರಾಜ್ಯ ಪಟ್ಟಿಯಲ್ಲಿ) ಈ ಹಿಂದೆ ಇದ್ದ ನಮೂದು 52ರ ಮೇರೆಗೆ ಸಂಬಂಧಪಟ್ಟ ರಾಜ್ಯವು ವಿಧಿಸಿದ ಪ್ರವೇಶ ತೆರಿಗೆ, ಆಕ್ಟ್ರಾಯಿ, ಸ್ಥಳೀಯ ಸಂಸ್ಥೆ ತೆರಿಗೆ ಅಥವಾ ಇತರೆ ಯಾವುದೇ ತೆರಿಗೆ;

(ಡಿ) ಸಂವಿಧಾನದ ಏಳನೆಯ ಅನುಸೂಚಿಯ ಪಟ್ಟಿ– IIರ ಮೇರೆಗೆ (ರಾಜ್ಯ ಪಟ್ಟಿಯಲ್ಲಿ) ಈ ಹಿಂದೆ ಇದ್ದ ನಮೂದು 62ರ ಮೇರೆಗೆ ಸಂಬಂಧಪಟ್ಟ ರಾಜ್ಯವು ಮನರಂಜನೆಗಳು, ಕ್ರೀಡೆಗಳು, ಬಾಜಿ ಮತ್ತು ಜೂಜಾಟದ ಮೇಲೆ ವಿಧಿಸಿದ ತೆರಿಗೆಗಳೂ ಸೇರಿದಂತೆ, ವಿಲಾಸ ವಸ್ತುಗಳ ಮೇಲಿನ ತೆರಿಗೆಗಳು ಅಥವಾ ಇತರ ಯಾವುದೇ ತೆರಿಗೆ;

(ಇ) ಸಂವಿಧಾನದ ಏಳನೆಯ ಅನುಸೂಚಿಯ ಪಟ್ಟಿ–II ರಲ್ಲಿ (ರಾಜ್ಯ ಪಟ್ಟಿಯಲ್ಲಿ) ಈ ಹಿಂದೆ ಇದ್ದ ನಮೂದು 55ರ ಮೇರೆಗೆ ಸಂಬಂಧಪಟ್ಟ ರಾಜ್ಯವು ವಿಧಿಸಿದ ಜಾಹೀರಾತಿನ ಮೇಲಿನ ತೆರಿಗೆ ಅಥವಾ ಇತರ ಯಾವುದೇ ತೆರಿಗೆ;

(ಎಫ್) ಸಂವಿಧಾನದಲ್ಲಿ ಈ ಹಿಂದೆ ಇದ್ದ ಅನುಚ್ಛೇದ 268ರ ಮೇರೆಗೆ ಕೇಂದ್ರ ಸರ್ಕಾರವು ವಿಧಿಸಿದ, ಆದರೆ ಸಂಬಂಧಪಟ್ಟ ರಾಜ್ಯ ಸರ್ಕಾರವು ಸಂಗ್ರಹಿಸಿದ ಮತ್ತು ಇಟ್ಟುಕೊಂಡ ಔಷಧಗಳ ಮತ್ತು ಪ್ರಸಾಧನ ವಸ್ತುಗಳ ತಯಾರಿಕೆಗಳ ಮೇಲಿನ ಉತ್ಪಾದನಾ ಸುಂಕಗಳು;

(ಜಿ) ಉಪಪ್ರಕರಣ (4)ರ ಮೇರೆಗೆ ಅಧಿಸೂಚಿಸಿದ ಯಾವುದೇ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ಸಂವಿಧಾನದ ಏಳನೆಯ ಅನುಸೂಚಿಯ ಪಟ್ಟಿ – IIರ ನಮೂದು 52, 54, 55 ಮತ್ತು 62ರ ಮೇರೆಗೆ ಓದಿಕೊಂಡಂತೆ

ನಮೂದು 66 ರಂತೆ ವಿಧಿಸಬಹುದಾದ ಯಾವುದೇ ಉಪಕರವು ಅಥವಾ ಸರ್ ಚಾರ್ಜ್ ಅಥವಾ ಶುಲ್ಕವು: ಸಂವಿಧಾನ (ನೂರಾ ಒಂದನೆಯ ತಿದ್ದುಪಡಿ) ಅಧಿನಿಯಮ, 2016ರ ಉಪಬಂಧಗಳ ಪ್ರಾರಂಭಕ್ಕೆ ಮುಂಚೆ ಸರಕುಗಳ ಹಾಗೂ ಸೇವೆಗಳ ತೆರಿಗೆಯಲ್ಲಿ ಸೇರಿಹೋಗಿರುವವೋ ಆ ತೆರಿಗೆಗಳಿಗೆ ಸಂಬಂಧಿಸಿದ ಮರುಪಾವತಿಗಳ ನಿವ್ವಳ ಮೊತ್ತ:

ಪರಂತು, ಈ ಕೆಳಕಂಡ ತೆರಿಗೆಗಳ ಮೇರೆಗೆ ಎಂದರೆ:–

(ಎ) ಕಚ್ಚಾ ಪೆಟ್ರೋಲಿಯಂ, ಹೈಸ್ಪೀಡ್ ಡೀಸೆಲ್, ಮೋಟಾರ್ ಸ್ಪಿರಿಟ್ (ಸಾಮಾನ್ಯವಾಗಿ ಪೆಟ್ರೋಲ್ ಎಂದು ಕರೆಯುವ) ನೈಸರ್ಗಿಕ ಅನಿಲ, ಏವಿಯೇಷನ್, ಟರ್ಬೈನ್ ಇಂಧನ ಮತ್ತು ಮಾನವನ ಬಳಕೆಯ ಆಲ್ಕೋಹಾಲಿಕ್ ಮದ್ಯದ ಮಾರಾಟ ಅಥವಾ ಖರೀದಿಯ ಮೇಲೆ, ಸಂವಿಧಾನ (ನೂರಾ ಒಂದನೆಯ ತಿದ್ದುಪಡಿ) ಅಧಿನಿಯಮ, 2016ರ ಉಪಬಂಧಗಳು ಜಾರಿಗೆ ಬರುವುದಕ್ಕೆ ಮುಂಚೆ, ಸಂವಿಧಾನದ ಏಳನೆಯ ಅನುಸೂಚಿಯ ಪಟ್ಟಿ – IIರಲ್ಲಿ (ರಾಜ್ಯ ಪಟ್ಟಿಯಲ್ಲಿ) ಈ ಹಿಂದೆ ಇದ್ದ ನಮೂದು 54ರ ನಿಮಿತ್ತ ಅಧಿನಿಯಮಿತವಾದ ಯಾವುದೇ ಅಧಿನಿಯಮದ ಮೇರೆಗೆ ಯಾವುದೇ ತೆರಿಗೆಯನ್ನು ವಿಧಿಸಿದ್ದರಿಂದಾಗಿ;

(ಬಿ) ಕಚ್ಚಾ ಪೆಟ್ರೋಲಿಯಂ, ಹೈಸ್ಪೀಡ್ ಡೀಸೆಲ್, ಮೋಟಾರ್ ಸ್ಪಿರಿಟ್ (ಸಾಮಾನ್ಯವಾಗಿ ಪೆಟ್ರೋಲ್ ಎಂದು ಕರೆಯುವ) ನೈಸರ್ಗಿಕ ಅನಿಲ, ಏವಿಯೇಷನ್ ಟರ್ಬೈನ್ ಇಂಧನ ಮತ್ತು ಮಾನವನ ಬಳಕೆಯ ಆಲ್ಕೋಹಾಲಿಕ್ ಮದ್ಯದ ಮಾರಾಟ ಅಥವಾ ಖರೀದಿಯ ಮೇಲೆ ಕೇಂದ್ರ ಮಾರಾಟ ತೆರಿಗೆ ಅಧಿನಿಯಮ, 1956 (1956ರ 74)ರ ಮೇರೆಗೆ ತೆರಿಗೆಯನ್ನು ವಿಧಿಸಿದ್ದರಿಂದಾಗಿ;

(ಸಿ) ಕಚ್ಚಾ ಪೆಟ್ರೋಲಿಯಂ, ಹೈಸ್ಪೀಡ್ ಡೀಸೆಲ್, ಮೋಟಾರ್ ಸ್ಪಿರಿಟ್ (ಸಾಮಾನ್ಯವಾಗಿ ಪೆಟ್ರೋಲ್ ಎಂದು ಕರೆಯುವ) ನೈಸರ್ಗಿಕ ಅನಿಲ, ಏವಿಯೇಷನ್, ಟರ್ಬೈನ್ ಇಂಧನ ಮತ್ತು ಮಾನವನ ಬಳಕೆಯ ಆಲ್ಕೋಹಾಲಿಕ್ ಮದ್ಯದ ಮಾರಾಟ ಅಥವಾ ಖರೀದಿಯ ಮೇಲೆ ರಾಜ್ಯ ಸರ್ಕಾರವು ಯಾವುದೇ ಉಪಕರವನ್ನು ವಿಧಿಸಿದ್ದರಿಂದಾಗಿ;

(ಡಿ) ಸಂವಿಧಾನ (ನೂರಾ ಒಂದನೆಯ ತಿದ್ದುಪಡಿ) ಅಧಿನಿಯಮ, 2016ರ ಉಪಬಂಧಗಳು ಜಾರಿಗೆ ಬರುವುದಕ್ಕೆ ಮುಂಚೆ, ಸಂವಿಧಾನದ ಏಳನೆಯ ಅನುಸೂಚಿಯ ಪಟ್ಟಿ–II ರಲ್ಲಿ (ರಾಜ್ಯ ಪಟ್ಟಿಯಲ್ಲಿ) ಈ ಹಿಂದೆ ಇದ್ದ ನಮೂದು 62ರ ಮೇರೆಗೆ ಅಧಿನಿಯಮಿತವಾದ ಯಾವುದೇ ಅಧಿನಿಯಮದ ಮೇರೆಗೆ ರಾಜ್ಯವು ವಿಧಿಸಿದ್ದ, ಆದರೆ ಸ್ಥಳೀಯ ಸಂಸ್ಥೆಗಳು ಸಂಗ್ರಹಿಸಿದ್ದ ಮನರಂಜನಾ ತೆರಿಗೆಯಿಂದಾಗಿ;

– ರಾಜ್ಯದಲ್ಲಿ ಆಧಾರ ವರ್ಷದ ಅವಧಿಯಲ್ಲಿ ಸಂಗ್ರಹಿಸಿದ ರಾಜಸ್ವವನ್ನು, ಮರುಪಾವತಿಗಳ ನಿವ್ವಳ ಮೊತ್ತವನ್ನು, ಆ ರಾಜ್ಯದ ಆಧಾರ ವರ್ಷದ ರಾಜಸ್ವವನ್ನು ಲೆಕ್ಕ ಹಾಕುವಾಗ ಒಳಗೊಂಡಿರತಕ್ಕದ್ದಲ್ಲ.

(2) *ಜಮ್ಮು ಮತ್ತು ಕಾಶ್ಮೀರ ರಾಜ್ಯದ ಸಂಬಂಧದಲ್ಲಿ, ಆಧಾರ ವರ್ಷದ ರಾಜಸ್ವದಲ್ಲಿ, ಸದರಿ ರಾಜ್ಯ ಸರ್ಕಾರವು ಆಧಾರ ವರ್ಷದಲ್ಲಿ ಸೇವೆಗಳ ಮಾರಾಟದ ಮೇಲೆ ಸಂಗ್ರಹಿಸಿದ ತೆರಿಗೆಯ ಮೊಬಲಗು ಒಳಗೊಂಡಿರತಕ್ಕದ್ದು.

(3) ಸಂವಿಧಾನದ 279ಎ ಅನುಚ್ಛೇದದ ಖಂಡ (4)ರ ಉಪಖಂಡ (ಜಿ)ನಲ್ಲಿ ಹೇಳಿರುವ ರಾಜ್ಯಗಳ ಸಂಬಂಧದಲ್ಲಿ, ಉಪಪ್ರಕರಣ (1)ರಲ್ಲಿ ಉಲ್ಲೇಖಿಸಿದಂಥ ನಿರ್ದಿಷ್ಟ ತೆರಿಗೆಗಳಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಕೈಗಾರಿಕಾ ಬಂಡವಾಳ

---

* ನೋಡಿ ಅಧಿಸೂಚನೆ ಸಂಖ್ಯೆ ಎಸ್.ಓ 3912 (ಇ) ದಿನಾಂಕ:30ನೇ ಅಕ್ಟೋಬರ್ 2019. ಈ ಅಧಿನಿಯಮವು ಜಮ್ಮು ಮತ್ತು ಕಾಶ್ಮೀರ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಮತ್ತು ಲಡಾಖ್ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಅನ್ವಯವಾಗುವಂತೆ ಮಾಡಲಾಗಿದೆ.

ಹೂಡಿಕೆಯನ್ನು ಉತ್ತೇಜಿಸಲು, ಸದರಿ ರಾಜ್ಯ ಸರ್ಕಾರಗಳು ನೀಡಿದ ವಿನಾಯಿತಿಗಳ ಅಥವಾ ಮಾಫಿ ಕಾರಣದಿಂದಾಗಿ ಬಿಟ್ಟುಬಿಟ್ಟಿರುವ ರಾಜಸ್ವದ ಮೊಬಲಗು ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ರಾಜ್ಯದ ಒಟ್ಟು ಆಧಾರ ವರ್ಷದ ರಾಜಸ್ವದಲ್ಲಿ ಒಳಗೊಂಡಿರತಕ್ಕದ್ದು.

(4) ಕೇಂದ್ರ ಮತ್ತು ರಾಜ್ಯ ಅಧಿನಿಯಮಗಳ ಸರಕುಗಳು ಮತ್ತು ಸೇವೆಗಳ ತೆರಿಗೆಯಲ್ಲಿ ಯಾವ ನಿರ್ದಿಷ್ಟ ತೆರಿಗೆಗಳು ಸೇರಿ ಹೋಗುತ್ತವೆಯೋ ಆ ನಿರ್ದಿಷ್ಟ ತೆರಿಗೆಗಳು ಅಧಿಸೂಚಿಸಬಹುದಾದಂತೆ ಇರತಕ್ಕದ್ದು.

(5) ಆಧಾರ ವರ್ಷದ ರಾಜಸ್ವವನ್ನು, ಭಾರತದ ಲೆಕ್ಕ ನಿಯಂತ್ರಕ ಹಾಗೂ ಮಹಾ ಲೆಕ್ಕಪರಿಶೋಧಕನು ಲೆಕ್ಕಪರಿಶೋಧಿಸಿರುವಂತೆ, ಆ ವರ್ಷದಲ್ಲಿ ಸಂಗ್ರಹಿಸಿದ ರಾಜಸ್ವದ ಅಂಕಿಗಳ ಮತ್ತು ನೀಡಿದ ಮರುಪಾವತಿಗಳ ನಿವ್ವಳ ಮೊತ್ತದ ಆಧಾರದ ಮೇಲೆ ಉಪಪ್ರಕರಣ (1), (2), (3) ಮತ್ತು (4)ರ ಅನುಸಾರವಾಗಿ ಲೆಕ್ಕಹಾಕತಕ್ಕದ್ದು.

(6) ಯಾವುದೇ ರಾಜ್ಯಕ್ಕೆ ಸಂಬಂಧಿಸಿದಂತೆ, ಉಪಪ್ರಕರಣ (1), (2), (3) ಮತ್ತು (4)ರಲ್ಲಿ ನಮೂದಿಸಿದ ರಾಜಸ್ವಗಳ ಯಾವುದೇ ಭಾಗವು, ಸಂಬಂಧಪಟ್ಟ ರಾಜ್ಯದ ಸಂಚಿತ ನಿಧಿಯಲ್ಲಿ ಜಮೆಯಾಗಿರದಿದ್ದರೆ, ಅದನ್ನು ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ರಾಜ್ಯದ ಒಟ್ಟು ಆಧಾರ ವರ್ಷದ ರಾಜಸ್ವದಲ್ಲಿ ಸೇರಿಸತಕ್ಕದ್ದು.

**6. ಯಾವುದೇ ವರ್ಷಕ್ಕೆ ಮುನ್ನಂದಾಜು ಮಾಡಿದ ರಾಜಸ್ವ.–** ಒಂದು ರಾಜ್ಯದಲ್ಲಿ ಯಾವುದೇ ವರ್ಷಕ್ಕೆ ಮುನ್ನಂದಾಜು ಮಾಡಿದ ರಾಜಸ್ವವನ್ನು ಆ ರಾಜ್ಯದ ಆಧಾರ ವರ್ಷದ ರಾಜಸ್ವದ ಬೆಳವಣಿಗೆ ಮುನ್ನಂದಾಜು ದರವನ್ನು ಅನ್ವಯಿಸಿ ಲೆಕ್ಕಹಾಕತಕ್ಕದ್ದು.

**ದೃಷ್ಟಾಂತ.–** ಪ್ರಕರಣ 5ರ ಲೆಕ್ಕಹಾಕಿದ ಸಂಬಂಧಪಟ್ಟ ರಾಜ್ಯದ 2015–16ರ ಆಧಾರ ವರ್ಷದ ರಾಜಸ್ವವು ಒಂದು ನೂರು ರೂಪಾಯಿಯಾಗಿದ್ದರೆ, ಆಗ 2018–19ನೇ ಹಣಕಾಸು ವರ್ಷಕ್ಕೆ ಮುನ್ನಂದಾಜು ಮಾಡಿದ ರಾಜಸ್ವವು ಈ ಕೆಳಕಂಡಂತಿರತಕ್ಕದ್ದು:–

2018–19 ಕ್ಕೆ ಮುನ್ನಂದಾಜು ಮಾಡಿದ ರಾಜಸ್ವ $=100\ (1+14/100)^3$

**7. ನಷ್ಟಪರಿಹಾರದ ಲೆಕ್ಕಾಚಾರ ಮತ್ತು ಬಿಡುಗಡೆ.–** (1) ಈ ಅಧಿನಿಯಮದ ಮೇರೆಗಿನ ನಷ್ಟಪರಿಹಾರವನ್ನು ಪರಿವರ್ತನೆ ಅವಧಿಯಲ್ಲಿ ಯಾವುದೇ ರಾಜ್ಯಕ್ಕೆ ಸಂದಾಯ ಮಾಡತಕ್ಕದ್ದು.

(2) ರಾಜ್ಯಕ್ಕೆ ಸಂದಾಯವಾಗಬೇಕಾದ ನಷ್ಟಪರಿಹಾರವನ್ನು ತಾತ್ಕಾಲಿಕವಾಗಿ ಲೆಕ್ಕಹಾಕತಕ್ಕದ್ದು ಮತ್ತು ಪ್ರತಿ ಎರಡು ತಿಂಗಳುಗಳ ಅವಧಿಯ ಮುಕ್ತಾಯದಲ್ಲಿ ಬಿಡುಗಡೆ ಮಾಡತಕ್ಕದ್ದು ಮತ್ತು ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾ ಲೆಕ್ಕಪರಿಶೋಧಕನು ಲೆಕ್ಕಪರಿಶೋಧಿಸಿರುವ, ಅಂತಿಮ ರಾಜಸ್ವದ ಅಂಕಿಗಳನ್ನು ಸ್ವೀಕರಿಸಿದ ನಂತರ, ಪ್ರತಿ ಹಣಕಾಸು ವರ್ಷಕ್ಕಾಗಿ ಅಂತಿಮವಾಗಿ ಲೆಕ್ಕಹಾಕತಕ್ಕದ್ದು:

ಪರಂತು, ಸಂಗ್ರಹಿಸಿದ ರಾಜಸ್ವದ ಲೆಕ್ಕಪರಿಶೋಧಿತ ಅಂಕಿಗಳ ಪ್ರಕಾರ, ಪರಿವರ್ತನೆ ಅವಧಿಯ ಯಾವುದೇ ಹಣಕಾಸು ವರ್ಷದಲ್ಲಿ ರಾಜ್ಯಕ್ಕೆ ನಷ್ಟಪರಿಹಾರವಾಗಿ ಯಾವುದೇ ಹೆಚ್ಚಿನ ಮೊಬಲಗನ್ನು ಬಿಡುಗಡೆ ಮಾಡಿದ್ದರೆ ಹಾಗೆ ಬಿಡುಗಡೆ ಮಾಡಿದ ಹೆಚ್ಚಿನ ಮೊಬಲಗನ್ನು ತರುವಾಯದ ಹಣಕಾಸು ವರ್ಷದಲ್ಲಿ ಅಂಥ ರಾಜ್ಯಕ್ಕೆ ಸಂದಾಯವಾಗಬೇಕಾದ ನಷ್ಟಪರಿಹಾರ ಮೊಬಲಗಿಗೆ ಹೊಂದಾಣಿಕೆ ಮಾಡತಕ್ಕದ್ದು.

(3) ಪರಿವರ್ತನೆ ಅವಧಿಯ ಯಾವುದೇ ಹಣಕಾಸು ವರ್ಷದಲ್ಲಿ ಯಾವುದೇ ರಾಜ್ಯಕ್ಕೆ ಅವಧಿಗಾಗಿ ಸಂದಾಯವಾಗಬೇಕಾದ ಒಟ್ಟು ನಷ್ಟಪರಿಹಾರವನ್ನು, ಈ ಕೆಳಕಂಡ ರೀತಿಯಲ್ಲಿ ಎಂದರೆ:–

(ಎ) ಸರಕುಗಳ ಮತ್ತು ಸೇವೆಗಳ ತೆರಿಗೆ ಇಲ್ಲದಿದ್ದರೆ ಪರಿವರ್ತನೆ ಅವಧಿಯ ಯಾವುದೇ ಹಣಕಾಸು ವರ್ಷದ ಮುನ್ನಂದಾಜು ರಾಜಸ್ವವು ಒಂದು ರಾಜ್ಯಕ್ಕೆ ಪ್ರಾಪ್ತವಾಗಬಹುದಾಗಿತ್ತೋ, ಆ ರಾಜಸ್ವವನ್ನು, ಪ್ರಕರಣ 6ಕ್ಕೆ ಅನುಸಾರವಾಗಿ ಲೆಕ್ಕ ಹಾಕತಕ್ಕದ್ದು;

(ಬಿ) ಪರಿವರ್ತನೆ ಅವಧಿಯ ಯಾವುದೇ ಹಣಕಾಸು ವರ್ಷದ ಅವಧಿಯಲ್ಲಿ ರಾಜ್ಯವು ಸಂಗ್ರಹಿಸಿದ ವಾಸ್ತವಿಕ ರಾಜಸ್ವವು ಯಾವುದೆಂದರೆ, ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾ ಲೆಕ್ಕಪರಿಶೋಧಕನು ಪ್ರಮಾಣೀಕರಿಸಿದಂತೆ,–

(i) ರಾಜ್ಯ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಧ್ಯಾಯ XI ಮತ್ತು XX ರ ಮೇರೆಗೆ ರಾಜ್ಯವು ಸಂಗ್ರಹಿಸಿದ ರಾಜ್ಯ ತೆರಿಗೆಯ ವಾಸ್ತವಿಕ ರಾಜಸ್ವ, ಸದರಿ ರಾಜ್ಯವು ಮಾಡಿದ ಮರುಪಾವತಿಗಳ ನಿವ್ವಳ ಮೊತ್ತ;

(ii) ಆ ರಾಜ್ಯಕ್ಕೆ ಹಂಚಿಕೆ ಮಾಡಿದ ಏಕೀಕೃತ ಸರಕುಗಳ ಮತ್ತು ಸೇವೆಗಳ ತೆರಿಗೆ; ಮತ್ತು

(iii) ಪ್ರಕರಣ 5ರ ಉಪಪ್ರಕರಣ (4)ರಲ್ಲಿ ನಿರ್ದಿಷ್ಟಪಡಿಸಿದ ಅಧಿನಿಯಮಗಳ ಮೇರೆಗೆ ಸದರಿ ರಾಜ್ಯವು ವಿಧಿಸಿದ ತೆರಿಗೆಗಳಿಂದ ಸಂಗ್ರಹವಾದ ಯಾವುದೇ ಮೊತ್ತ, ಮರುಪಾವತಿಯಾದಂಥ ತೆರಿಗೆಗಳ ನಿವ್ವಳ ಮೊತ್ತ.

(ಸಿ) ಯಾವುದೇ ಹಣಕಾಸು ವರ್ಷದಲ್ಲಿ ಸಂದಾಯವಾಗಬೇಕಾದ ಒಟ್ಟು ನಷ್ಟಪರಿಹಾರ ಯಾವುದೆಂದರೆ, ಯಾವುದೇ ಹಣಕಾಸು ವರ್ಷಕ್ಕೆ ಮುನ್ನಂದಾಜು ಮಾಡಿದ ರಾಜಸ್ವದ ಮತ್ತು (ಬಿ) ಖಂಡದಲ್ಲಿ ಉಲ್ಲೇಖಿಸಿರುವ, ರಾಜ್ಯವು ಸಂಗ್ರಹಿಸಿದ ವಾಸ್ತವಿಕ ರಾಜಸ್ವದ ನಡುವಣ ವ್ಯತ್ಯಾಸದ ಮೊತ್ತ.

(4) ಪರಿವರ್ತನೆ ಅವಧಿಯಲ್ಲಿ ರಾಜ್ಯದಲ್ಲಿ ಯಾವುದೇ ವರ್ಷದಲ್ಲಿ ಪ್ರತಿ ಎರಡು ತಿಂಗಳುಗಳ ಅವಧಿಯ ಮುಕ್ತಾಯದಲ್ಲಿ ರಾಜಸ್ವದಲ್ಲಿ ಆಗಿರುವ ನಷ್ಟವನ್ನು, ಸದರಿ ಅವಧಿಯ ಮುಕ್ತಾಯದಲ್ಲಿ ಈ ಕೆಳಕಂಡ ರೀತಿಯಲ್ಲಿ ಎಂದರೆ:–

(ಎ) ಸರಕುಗಳು ಮತ್ತು ಸೇವೆಗಳ ತೆರಿಗೆ ಇಲ್ಲದಿದ್ದಾಗ ರಾಜ್ಯವು ಆಯಾ ಹಣಕಾಸು ವರ್ಷದ ಎರಡು ಸುಸಂಗತ ತಿಂಗಳ ಅವಧಿಯ ಮುಕ್ತಾಯದವರೆಗೆ, ಗಳಿಸಬಹುದಾಗಿರುವ ಮುನ್ನಂದಾಜು ಮಾಡಿದ ರಾಜಸ್ವವನ್ನು, ಪರಿವರ್ತನೆ ಅವಧಿಯ ಯಾವುದೇ ಹಣಕಾಸು ವರ್ಷಕ್ಕೆ ಪ್ರಕರಣ 6ರ ಅನುಸಾರವಾಗಿ ಲೆಕ್ಕಹಾಕಿದ ಪ್ರಕಾರ, ಮುನ್ನಂದಾಜು ಮಾಡಿದ ಒಟ್ಟು ರಾಜಸ್ವದ ಶೇಕಡಾ ಪ್ರಮಾಣದಂತೆ ದಾಮಾಷಾ ಆಧಾರದ ಮೇಲೆ ಲೆಕ್ಕಹಾಕತಕ್ಕದ್ದು.

ದೃಷ್ಟಾಂತ.– ಪ್ರಕರಣ 6ರ ಅನುಸಾರವಾಗಿ ಯಾವುದೇ ವರ್ಷಕ್ಕೆ ಲೆಕ್ಕಹಾಕಿದ ಮುನ್ನಂದಾಜು ಮಾಡಿದ ರಾಜಸ್ವವು ಒಂದು ನೂರು ರೂಪಾಯಿಗಳಾಗಿದ್ದರೆ, ಈ ಉಪಪ್ರಕರಣದ ಉದ್ದೇಶಕ್ಕಾಗಿ ಹತ್ತು ತಿಂಗಳುಗಳ ಅವಧಿಯ ಮುಕ್ತಾಯದವರೆಗೆ ಗಳಿಸಬಹುದಾಗಿರುವ ಮುನ್ನಂದಾಜು ಮಾಡಿದ ರಾಜಸ್ವವನ್ನು 100 x (5/6)= ರೂ. 83.33 ಎಂದು ಲೆಕ್ಕಹಾಕತಕ್ಕದ್ದು;

(ಬಿ) ಪರಿವರ್ತನೆ ಅವಧಿಯ ಯಾವುದೇ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ ಯುಕ್ತ ಎರಡು ತಿಂಗಳುಗಳ ಅವಧಿ ಮುಕ್ತಾಯದವರೆಗೆ ರಾಜ್ಯವು ಸಂಗ್ರಹಿಸಿದ ವಾಸ್ತವಿಕ ರಾಜಸ್ವವು ಯಾವುದೆಂದರೆ:–

(i) ರಾಜ್ಯ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಅಧ್ಯಾಯ XI ಮತ್ತು XX ರ ಮೇರೆಗೆ ರಾಜ್ಯವು ಸಂಗ್ರಹಿಸಿದ ರಾಜ್ಯ ತೆರಿಗೆಯ ವಾಸ್ತವಿಕ ರಾಜಸ್ವ, ಆ ರಾಜ್ಯವು ಮಾಡಿದ ಮರುಪಾವತಿಗಳ ನಿವ್ವಳ ಮೊತ್ತ;

(ii) ಕೇಂದ್ರ ಅಬಕಾರಿ ಮತ್ತು ಸೀಮಾಸುಂಕಗಳ ಮಂಡಳಿಯ ಲೆಕ್ಕಪತ್ರಗಳ ಪ್ರಧಾನ ಲೆಕ್ಕನಿಯಂತ್ರಕನು ಪ್ರಮಾಣೀಕರಿಸಿದಂತೆ, ಆ ರಾಜ್ಯಕ್ಕೆ ಹಂಚಿಕೆ ಮಾಡಿದ ಏಕೀಕೃತ ಸರಕುಗಳು ಮತ್ತು ಸೇವೆಗಳ ತೆರಿಗೆ ಮೊತ್ತ; ಮತ್ತು

(iii) ಪ್ರಕರಣ 5ರ ಉಪಪ್ರಕರಣ (4)ರಲ್ಲಿ ನಿರ್ದಿಷ್ಟಪಡಿಸಿದ ಅಧಿನಿಯಮಗಳ ಮೇರೆಗೆ ಸದರಿ ರಾಜ್ಯವು ವಿಧಿಸಿದ ಯಾವುದೇ ತೆರಿಗೆಗಳ ಸಂಗ್ರಹಣೆ ಮೊತ್ತ, ಅಂಥ ತೆರಿಗೆಗಳ ಮರುಪಾವತಿಯ ನಿವ್ವಳ ಮೊತ್ತ.

(ಸಿ) ಯಾವುದೇ ಹಣಕಾಸು ವರ್ಷದಲ್ಲಿ ಸುಸಂಗತವಾದ ಎರಡು ತಿಂಗಳುಗಳ ಅವಧಿಯ ಮುಕ್ತಾಯದಲ್ಲಿ, ಯಾವುದೇ ರಾಜ್ಯಕ್ಕೆ ಸಂದಾಯವಾಗಬೇಕಾದ ತಾತ್ಕಾಲಿಕ ನಷ್ಟಪರಿಹಾರವು ಯಾವುದೆಂದರೆ, ಪರಿವರ್ತನೆ ಅವಧಿಯಲ್ಲಿ ಸದರಿ ಹಣಕಾಸು ವರ್ಷದಲ್ಲಿ ಹಿಂದಿನ ಎರಡು ತಿಂಗಳುಗಳ ಅವಧಿಯ ಮುಕ್ತಾಯದವರೆಗೆ ರಾಜ್ಯಕ್ಕೆ ಸಂದಾಯವಾದ ತಾತ್ಕಾಲಿಕ ನಷ್ಟಪರಿಹಾರದಷ್ಟು ಕಡಿಮೆ ಮಾಡಿದ, (ಎ) ಖಂಡಕ್ಕೆ ಅನುಸಾರವಾಗಿ ಸುಸಂಗತ ಅವಧಿಯ ಮುಕ್ತಾಯದವರೆಗೆ ಮುನ್ನಂದಾಜು ಮಾಡಿದ ರಾಜಸ್ವದ ಮತ್ತು (ಬಿ) ಖಂಡದಲ್ಲಿ ಉಲ್ಲೇಖಿಸಿರುವ ಸದರಿ ಅವಧಿಯಲ್ಲಿ ರಾಜ್ಯವು ಸಂಗ್ರಹಿಸಿದ ವಾಸ್ತವಿಕ ರಾಜಸ್ವದ ನಡುವಣ ವ್ಯತ್ಯಾಸದ ಮೊತ್ತ.

(5) ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾ ಲೆಕ್ಕಪರಿಶೋಧಕನಿಂದ ಲೆಕ್ಕಪರಿಶೋಧಿತವಾದ ರಾಜಸ್ವ ಅಂಕಿಗಳನ್ನು ಸ್ವೀಕರಿಸಿದ ತರುವಾಯ, ಉಪಪ್ರಕರಣ (3)ರ ಉಪಬಂಧಗಳಿಗನುಸಾರವಾಗಿ ಲೆಕ್ಕಹಾಕಿದ ರಾಜ್ಯಕ್ಕೆ ಸಂದಾಯವಾಗಬೇಕಾದ ಅಂತಿಮ ನಷ್ಟಪರಿಹಾರದ ಮೊಬಲಗು ಮತ್ತು ಉಪಪ್ರಕರಣ (4)ರ ಉಪಬಂಧಗಳಿಗನುಸಾರವಾಗಿ ಸದರಿ ಹಣಕಾಸು ವರ್ಷದಲ್ಲಿ ರಾಜ್ಯಕ್ಕೆ ಬಿಡುಗಡೆ ಮಾಡಿದ ಒಟ್ಟು ತಾತ್ಕಾಲಿಕ ನಷ್ಟಪರಿಹಾರದ ಮೊಬಲಗು, ಈ ಎರಡರ ನಡುವೆ ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ ಅಂಥ ವ್ಯತ್ಯಾಸದ ಹಣವನ್ನು ತರುವಾಯದ ಹಣಕಾಸು ವರ್ಷದಲ್ಲಿ ಆ ರಾಜ್ಯಕ್ಕೆ ಬಿಡುಗಡೆ ಮಾಡುವ ನಷ್ಟಪರಿಹಾರದಲ್ಲಿ ಹೊಂದಾಣಿಕೆ ಮಾಡತಕ್ಕದ್ದು.

(6) ಯಾವುದೇ ಹಣಕಾಸು ವರ್ಷದಲ್ಲಿ ಬಿಡುಗಡೆ ಮಾಡಬೇಕಾದ ಯಾವುದೇ ನಷ್ಟಪರಿಹಾರ ಬಾಕಿ ಇರದಿದ್ದರೆ ಮತ್ತು ಹಿಂದಿನ ಹಣಕಾಸು ವರ್ಷದಲ್ಲಿ ರಾಜ್ಯಕ್ಕೆ ಯಾವುದೇ ಅಧಿಕ ಮೊಬಲಗನ್ನು ಬಿಡುಗಡೆ ಮಾಡಿದ್ದರೆ, ಇಂಥ ಮೊಬಲಗನ್ನು ರಾಜ್ಯವು ಕೇಂದ್ರ ಸರ್ಕಾರಕ್ಕೆ ಮರುಪಾವತಿ ಮಾಡತಕ್ಕದ್ದು ಮತ್ತು ಅಂಥ ಮೊಬಲಗನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ನಿಧಿಗೆ ಜಮೆ ಮಾಡತಕ್ಕದ್ದು.

**8. ಉಪಕರ ವಿಧಿಸುವುದು ಮತ್ತು ಸಂಗ್ರಹಿಸುವುದು.–** (1) ಕೇಂದ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 9ರಲ್ಲಿ ಉಪಬಂಧಿಸಿದಂತೆ, ಸರಕುಗಳನ್ನು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನೂ ಒಂದು ರಾಜ್ಯದಿಂದ ಇನ್ನೊಂದು ರಾಜ್ಯದ ಒಳಗಡೆಗೆ ಮಾಡಿದ ಪೂರೈಕೆಗಳ ಮೇಲೆ ಮತ್ತು ಏಕೀಕೃತ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 5ರಲ್ಲಿ ಉಪಬಂಧಿಸಿದಂತೆ ಸರಕುಗಳನ್ನು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನೂ ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಮಾಡಿದ ಪೂರೈಕೆಗಳ ಮೇಲೆ ಉಪಕರವನ್ನು ವಿಧಿಸತಕ್ಕದ್ದು ಮತ್ತು ಪರಿಷತ್ತು ಶಿಫಾರಸ್ಸುಗಳನ್ನೂ ಮಾಡಿದಾಗ ಐದು ವರ್ಷಗಳ ಅವಧಿಗೆ ಅಥವಾ ನಿಯಮಿಸಬಹುದಾದಂಥ ಅವಧಿಗೆ, ಕೇಂದ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತಂದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಸರಕುಗಳ ಮತ್ತು ಸೇವೆಗಳ ತೆರಿಗೆ ಅನುಷ್ಠಾನದ ಕಾರಣದಿಂದಾಗಿ ಉಂಟಾಗುವ ರಾಜಸ್ವದ ನಷ್ಟಕ್ಕೆ ಸಂಬಂಧಿಸಿದಂತೆ ರಾಜ್ಯಗಳಿಗೆ ನಷ್ಟಪರಿಹಾರ ನೀಡುವ ಉದ್ದೇಶಗಳಿಗಾಗಿ, ಪರಿಷತ್ತು ಶಿಫಾರಸ್ಸುಗಳನ್ನು ಮಾಡಿದಾಗ, ನಿಯಮಿಸಬಹುದಾದಂಥ ರೀತಿಯಲ್ಲಿ ಆ ಉಪಕರವನ್ನು ಸಂಗ್ರಹಿಸತಕ್ಕದ್ದು:

ಪರಂತು, ಕೇಂದ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 10ರ ಮೇರೆಗೆ, ನಷ್ಟಪರಿಹಾರ ವಿಧಿಸುವುದನ್ನು ಆಯ್ಕೆ ಮಾಡಿಕೊಳ್ಳಲು ಯಾವ ತೆರಿಗೆದಾಯಕ ವ್ಯಕ್ತಿಯು ನಿರ್ಧರಿಸಿರುವನೋ ಆ ವ್ಯಕ್ತಿಯು ಮಾಡಿದ ಪೂರೈಕೆಗಳ ಮೇಲೆ ಅಂಥ ಉಪಕರವನ್ನು ವಿಧಿಸತಕ್ಕದ್ದಲ್ಲ.

(2) ಕೇಂದ್ರ ಸರ್ಕಾರವು, ಪರಿಷತ್ತು ಶಿಫಾರಸ್ಸುಗಳನ್ನು ಮಾಡಿದಾಗ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಅನುಸೂಚಿಯ ಅಂಕಣ (2)ರಲ್ಲಿ ನಿರ್ದಿಷ್ಟಪಡಿಸಿರುವಂಥ ಸರಕುಗಳ ಮತ್ತು ಸೇವೆಗಳ ಪೂರೈಕೆಗಳ ಮೇಲೆ ಅವುಗಳ ಮೌಲ್ಯದ, ಪರಿಮಾಣದ ಆಧಾರದ ಮೇಲೆ ಅಥವಾ ಅನುಸೂಚಿಯ ಅಂಕಣ (4)ರ ಎದುರಿಗೆ ಇರುವ ನಮೂದಿನಲ್ಲಿ ವಿವರಿಸಿದಂಥ ದರವನ್ನು ಮೀರದಿರುವಂಥ ದರದ ಆಧಾರದ ಮೇಲೆ ಉಪಕರವನ್ನು ವಿಧಿಸತಕ್ಕದ್ದು:

ಪರಂತು, ಉಪಕರವನ್ನು, ಸರಕುಗಳ ಅಥವಾ ಸೇವೆಗಳ ಅಥವಾ ಅವುಗಳೆರಡರ ಮೌಲ್ಯಕ್ಕೆ ಸಂಬಂಧಿಸಿದಂತೆ ವಿಧಿಸಬಹುದಾಗಿದ್ದರೆ, ಅಂಥ ಪ್ರತಿಯೊಂದು ಪೂರೈಕೆಗಾಗಿ ಮೌಲ್ಯವನ್ನು, ರಾಜ್ಯದ ಒಳಗಡೆಗೆ ಮತ್ತು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಸರಕುಗಳನ್ನು ಅಥವಾ ಸೇವೆಗಳನ್ನು ಅಥವಾ ಅವುಗಳೆರಡನ್ನೂ ಮಾಡಿದ ಎಲ್ಲ ಪೂರೈಕೆಗಳಿಗಾಗಿ ಕೇಂದ್ರ ಸರಕುಗಳ ಮತ್ತು ಸೇವೆಗಳ ತೆರಿಗೆಯನ್ನು ಅಧಿನಿಯಮದ ಪ್ರಕರಣ 15ರ ಮೇರೆಗೆ ನಿರ್ಧರಿಸತಕ್ಕದ್ದು:

ಮತ್ತು ಪರಂತು, ಭಾರತದೊಳಕ್ಕೆ ಆಮದು ಮಾಡಿಕೊಂಡ ಸರಕುಗಳ ಮೇಲಿನ ಉಪಕರವನ್ನು, ಸೀಮಾಸುಂಕ ದರ ಅಧಿನಿಯಮ, 1975ರ ಮೇರೆಗೆ ನಿರ್ಧರಿಸಿದ ಮೌಲ್ಯಕ್ಕೆ ಅನುಸಾರವಾಗಿ ಸೀಮಾಸುಂಕಗಳ ಅಧಿನಿಯಮ, 1962 (1962ರ 52)ರ ಪ್ರಕರಣ 12ರ ಮೇರೆಗೆ ಸದರಿ ಸರಕುಗಳ ಮೇಲೆ ಯಾವ ಹಂತದಲ್ಲಿ ಸೀಮಾಸುಂಕಗಳ ಸುಂಕಗಳನ್ನು ವಿಧಿಸಲಾಗುವುದೋ, ಆ ಹಂತದಲ್ಲೇ ಸೀಮಾಸುಂಕಗಳ ದರ ಅಧಿನಿಯಮ, 1975 (1975ರ 51)ರ ಪ್ರಕರಣ 3ರ ಉಪಬಂಧಗಳಿಗನುಸಾರವಾಗಿ ಉಪಕರವನ್ನು ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು.

**9. ರಿಟರ್ನ್ ಗಳು, ಸಂದಾಯಗಳು ಮತ್ತು ಮರುಪಾವತಿಗಳು.–** (1) ಸರಕುಗಳ ಅಥವಾ ಸೇವೆಗಳ ಅಥವಾ ಅವುಗಳೆರಡನ್ನು ಪೂರೈಕೆ ಮಾಡುವ ಪ್ರತಿಯೊಬ್ಬ ತೆರಿಗೆದಾಯಕ ವ್ಯಕ್ತಿಯು, ನಿಯಮಿಸಬಹುದಾದಂಥ ರೀತಿಯಲ್ಲಿ,–

(ಎ) ಈ ಅಧಿನಿಯಮದ ಮೇರೆಗೆ ಸಂದಾಯವಾಗಬೇಕಾದ ಉಪಕರದ ಮೊಬಲಗನ್ನು ಸಂದಾಯ ಮಾಡತಕ್ಕದ್ದು;

(ಬಿ) ಕೇಂದ್ರ ಸರಕುಗಳು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಮೇರೆಗೆ ಸಲ್ಲಿಸಬೇಕಾದ ರಿಟರ್ನ್ ಗಳ ಜೊತೆಯಲ್ಲಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಆ ರಿಟರ್ನ್ ಗಳನ್ನು ಸಲ್ಲಿಸತಕ್ಕದ್ದು; ಮತ್ತು

(ಸಿ) ಸಂದಾಯ ಮಾಡಿದಂಥ ಉಪಕರದ ಮರುಪಾವತಿಗಾಗಿ ಅಂಥ ನಿಯಮಿಸಿದಂಥ ನಮೂನೆಯಲ್ಲಿ ಅರ್ಜಿ ಸಲ್ಲಿಸತಕ್ಕದ್ದು.

(2) ಅರ್ಜಿ ನಮೂನೆಯನ್ನು ಭರ್ತಿ ಮಾಡಬೇಕಾಗಿರುವುದನ್ನು ಹೊರತುಪಡಿಸಿ, ರಿಟರ್ನ್ ಗಳನ್ನು ಸಲ್ಲಿಸುವ ಮತ್ತು ಮರುಪಾವತಿಗಳಿಗೆ ಕ್ಲೇಮು ಮಾಡುವ ಎಲ್ಲ ಉದ್ದೇಶಗಳಿಗಾಗಿ, ಕೇಂದ್ರ ಸರಕುಗಳು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಉಪಬಂಧಗಳು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು ಸದರಿ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಅಂಥ ಪೂರೈಕೆಗಳ ಮೇಲೆ ಕೇಂದ್ರ ತೆರಿಗೆಯನ್ನು ವಿಧಿಸುವುದಕ್ಕೆ ಮತ್ತು ಸಂಗ್ರಹಿಸುವುದಕ್ಕೆ ಸಂಬಂಧಪಟ್ಟಂತೆ ಅವು ಹೇಗೆ ಅನ್ವಯವಾಗುತ್ತವೆಯೋ, ಹಾಗೆಯೇ ತೆರಿಗೆದಾಯಕ ಸರಕುಗಳ ಅಥವಾ ಸೇವೆಗಳ ಅಥವಾ ಅವುಗಳೆರಡರ ಎಲ್ಲ ಪೂರೈಕೆಗಳ ಮೇಲೆ ಪ್ರಕರಣ 8ರ ಮೇರೆಗೆ ವಿಧಿಸಬಹುದಾದ ಉಪಕರವನ್ನು ವಿಧಿಸುವುದಕ್ಕೆ ಮತ್ತು ಸಂಗ್ರಹಿಸುವುದಕ್ಕೆ ಸಂಬಂಧಿಸಿದಂತೆಯೂ ಸಾಧ್ಯವಾಗಬಹುದಾದಷ್ಟುಮಟ್ಟಿಗೆ ಅನ್ವಯವಾಗತಕ್ಕದ್ದು.

**10. ನಿಧಿಗೆ ಉಪಕರದ ಉತ್ಪತ್ತಿಗಳನ್ನು ಜಮೆ ಮಾಡುವುದು.–** (1) ಪ್ರಕರಣ 8ರ ಮೇರೆಗೆ ವಿಧಿಸಬಹುದಾದ ಉಪಕರದ ಉತ್ಪತ್ತಿಗಳನ್ನು ಮತ್ತು ಪರಿಷತ್ತು ಶಿಫಾರಸ್ಸು ಮಾಡಬಹುದಾದಂಥ ಇತರ ಮೊಬಲಗುಗಳನ್ನು, ಸರಕುಗಳ ಮತ್ತು ಸೇವೆಗಳ ತೆರಿಗೆ ನಷ್ಟಪರಿಹಾರ ನಿಧಿ ಎಂದು ಕರೆಯಲಾಗುವ, ಲ್ಯಾಪ್ಸ್ ಆಗದಿರುವಂಥ ನಿಧಿಗೆ ಜಮೆ ಮಾಡತಕ್ಕದ್ದು, ಈ ನಿಧಿಯು ಪಬ್ಲಿಕ್ ಅಕೌಂಟ್ ಆಫ್ ಇಂಡಿಯಾದ ಭಾಗವಾಗಿರತಕ್ಕದ್ದು ಮತ್ತು ಈ ನಿಧಿಯನ್ನು ಸದರಿ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಗಳಿಗಾಗಿ ಬಳಸಿಕೊಳ್ಳತಕ್ಕದ್ದು.

(2) ಪ್ರಕರಣ 7ರ ಮೇರೆಗೆ ರಾಜ್ಯಗಳಿಗೆ ಸಂದಾಯವಾಗಬೇಕಾದ ಎಲ್ಲ ಮೊಬಲಗುಗಳನ್ನು ಈ ನಿಧಿಯಿಂದ ಸಂದಾಯ ಮಾಡತಕ್ಕದ್ದು.

(3) ಪರಿವರ್ತನೆ ಅವಧಿಯು ಮುಕ್ತಾಯವಾದಾಗ ನಿಧಿಯಲ್ಲಿ ಬಳಕೆಯಾಗದೆ ಉಳಿದಿರುವ ಮೊಬಲಗಿನ ಶೇ. ಐವತ್ತರಷ್ಟನ್ನು ಕೇಂದ್ರದ ಪಾಲು ಎಂಬುದಾಗಿ ಭಾರತದ ಸಂಚಿತ ನಿಧಿಗೆ ವರ್ಗಾಯಿಸತಕ್ಕದ್ದು ಮತ್ತು ಬಾಕಿ ಉಳಿದ ಶೇ. ಐವತ್ತರಷ್ಟನ್ನು, ಪರಿವರ್ತನೆ ಅವಧಿಯ ಕೊನೆಯ ವರ್ಷದಲ್ಲಿ, ರಾಜ್ಯ ತೆರಿಗೆಯಿಂದಾಗಿ ಅಥವಾ ಸಂದರ್ಭಾನುಸಾರ ಒಕ್ಕೂಟ ರಾಜ್ಯಕ್ಷೇತ್ರದ ಸರಕುಗಳ ಮತ್ತು ಸೇವೆಗಳ ತೆರಿಗೆಯಿಂದಾಗಿ ಸಂಗ್ರಹವಾದ, ರಾಜ್ಯಗಳ ಒಟ್ಟು ರಾಜಸ್ವಗಳ ಅನುಪಾತದ ಆಧಾರದ ಮೇಲೆ ರಾಜ್ಯಗಳಿಗೆ ವಿತರಿಸತಕ್ಕದ್ದು.

(3ಎ) ಉಪಪ್ರಕರಣ (3)ರಲ್ಲಿ, ಏನೇ ಒಳಗೊಂಡಿದ್ದರೂ, ಪರಿವರ್ತನೆ ಅವಧಿಯಲ್ಲಿ ಯಾವುದೇ ಹಣಕಾಸು ವರ್ಷದಲ್ಲಿ ಯಾವುದೇ ಕಾಲಘಟ್ಟದಲ್ಲಿ ಪರಿಷತ್ತು ಶಿಫಾರಸ್ಸು ಮಾಡಬಹುದಾದಂಥ ಯಾವ ಮೊತ್ತದಲ್ಲಿ ಶೇಕಡಾ ಐವತ್ತರಷ್ಟು ಮೊತ್ತವು ನಿಧಿಯಲ್ಲಿ ಬಳಕೆಯಾಗದೆ ಉಳಿದಿದೆಯೋ ಆ ಶೇಕಡಾ ಐವತ್ತರಷ್ಟು ಮೊತ್ತವನ್ನು ಕೇಂದ್ರದ ಪಾಲು ಎಂಬಂತೆ ಭಾರತದ ಸಂಚಿತ ನಿಧಿಗೆ ವರ್ಗಾಯಿಸತಕ್ಕದ್ದು ಮತ್ತು ಉಳಿದ ಶೇಕಡಾ ಐವತ್ತರಷ್ಟು ಮೊತ್ತವನ್ನು ರಾಜ್ಯಗಳಿಗೆ ಪ್ರಕರಣ 5ರ ಉಪಬಂಧಗಳಿಗೆ ಅನುಸಾರವಾಗಿ ನಿರ್ಧರಿಸಿದ ಆ ರಾಜ್ಯಗಳ ಆಧಾರ ವರ್ಷದ ರಾಜಸ್ವದ ಅನುಪಾತದಲ್ಲಿ ಹಂಚಿಕೆ ಮಾಡಲಾಗತಕ್ಕದ್ದು:

ಪರಂತು, ಪ್ರಕರಣ 7ರಡಿಯಲ್ಲಿ ಯಾವುದೇ ಎರಡು ತಿಂಗಳ ಅವಧಿಗಾಗಿ ಪರಿಹಾರವನ್ನು ಬಿಡುಗಡೆ ಮಾಡಬೇಕೆಂಬ ಅಗತ್ಯತೆಗೆ ಪ್ರತಿಯಾಗಿ ನಿಧಿಯಲ್ಲಿ ಸಂಗ್ರಹಿಸಿದ ಮೊತ್ತದಲ್ಲಿ ಕೊರತೆ ಕಂಡುಬಂದ ಸಂದರ್ಭದಲ್ಲಿ ಅದರ ಶೇಕಡಾ ಐವತ್ತರಷ್ಟನ್ನು, ಆದರೆ ಪರಿಷತ್ತು ಶಿಫಾರಸ್ಸು ಮಾಡಿದಂತೆ ಕೇಂದ್ರಕ್ಕೆ ಮತ್ತು ರಾಜ್ಯಗಳಿಗೆ ವರ್ಗಾಯಿಸಿದ ಒಟ್ಟು ಮೊತ್ತವನ್ನು ಮೀರದಂತೆ, ಕೇಂದ್ರದಿಂದ ವಸೂಲಿ ಮಾಡತಕ್ಕದ್ದು ಮತ್ತು ಉಳಿದ ಶೇಕಡಾ ಐವತ್ತರಷ್ಟನ್ನು ರಾಜ್ಯಗಳಿಂದ ತಮ್ಮ ಆಧಾರ ವರ್ಷದ ರಾಜಸ್ವದ ಅನುಪಾತದಲ್ಲಿ ಪ್ರಕರಣ 5ರ ಉಪಬಂಧಗಳಿಗೆ ಅನುಗುಣವಾಗಿ ನಿರ್ಧರಿಸಿ ವಸೂಲಿ ಮಾಡತಕ್ಕದ್ದು.

(4) ನಿಧಿಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು, ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾ ಲೆಕ್ಕಪರಿಶೋಧಕನಿಂದ ಅಥವಾ ಅವನು ನಿರ್ದಿಷ್ಟಪಡಿಸಬಹುದಾದ ಅಂಥ ಅವಧಿಯ ಅಂತರದಲ್ಲಿ ಅವನು ನೇಮಕ ಮಾಡಿದ ಯಾರೇ ವ್ಯಕ್ತಿಯಿಂದ ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು ಮತ್ತು ಅಂಥ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ತಗಲುವ ಯಾವುದೇ ವೆಚ್ಚವನ್ನು, ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾ ಲೆಕ್ಕಪರಿಶೋಧಕನಿಗೆ ಕೇಂದ್ರ ಸರ್ಕಾರವು ಸಂದಾಯ ಮಾಡತಕ್ಕದ್ದು.

(5) ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾ ಲೆಕ್ಕಪರಿಶೋಧಕನು ಅಥವಾ ಈ ಸಂಬಂಧದಲ್ಲಿ ಅವನು ನೇಮಕ ಮಾಡಿದ ಇತರ ಯಾರೇ ವ್ಯಕ್ತಿಯು ಪ್ರಮಾಣೀಕರಿಸಿದ ನಿಧಿಯ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನಾ ವರದಿಯೊಂದಿಗೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

**11. ಉಪಕರಕ್ಕೆ ಸಂಬಂಧಿಸಿದ ಇತರೆ ಉಪಬಂಧಗಳು.–** (1) ಕರ ನಿರ್ಧರಣೆಗೆ, ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ಗೆ, ವಿಧಿಸದಿರುವುದಕ್ಕೆ, ಕಡಿಮೆ ವಿಧಿಸುವುದಕ್ಕೆ, ಬಡ್ಡಿಗೆ, ಅಪೀಲುಗಳಿಗೆ, ಅಪರಾಧಗಳಿಗೆ ಮತ್ತು ದಂಡಗಳಿಗೆ ಸಂಬಂಧಿಸಿದವುಗಳೂ ಸೇರಿದಂತೆ, ಕೇಂದ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಉಪಬಂಧಗಳು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು, ಸದರಿ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಅಂಥ ರಾಜ್ಯದ ಒಳಗಡೆಗೆ ಮಾಡಿದ ಪೂರೈಕೆಗಳ ಮೇಲೆ ಕೇಂದ್ರ ತೆರಿಗೆಯನ್ನು ವಿಧಿಸುವುದಕ್ಕೆ ಮತ್ತು ಸಂಗ್ರಹಿಸುವುದಕ್ಕೆ ಸಂಬಂಧಪಟ್ಟಂತೆ ಅವು ಹೇಗೆ ಅನ್ವಯವಾಗುತ್ತವೆಯೋ, ಹಾಗೆಯೇ ರಾಜ್ಯದ ಒಳಗಡೆಗೆ ಮಾಡಿದ ಸರಕುಗಳ ಮತ್ತು ಸೇವೆಗಳ ಪೂರೈಕೆ ಮೇಲೆ ಪ್ರಕರಣ 8ರ ಮೇರೆಗೆ ವಿಧಿಸಬಹುದಾದ ಉಪಕರವನ್ನು ವಿಧಿಸುವುದಕ್ಕೆ ಮತ್ತು ಅದನ್ನು ಸಂಗ್ರಹಿಸುವ ಸಂಬಂಧದಲ್ಲಿಯೂ ಸಾಧ್ಯವಾಗಬಹುದಾದಷ್ಟುಮಟ್ಟಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

(2) ಕರ ನಿರ್ಧರಣೆಗೆ, ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ಗೆ, ವಿಧಿಸದಿರುವುದಕ್ಕೆ, ಕಡಿಮೆ ವಿಧಿಸುವುದಕ್ಕೆ, ಬಡ್ಡಿಗೆ, ಅಪೀಲುಗಳಿಗೆ, ಅಪರಾಧಗಳಿಗೆ ಮತ್ತು ದಂಡಗಳಿಗೆ ಸಂಬಂಧಿಸಿದವುಗಳೂ ಸೇರಿದಂತೆ, ಏಕೀಕೃತ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಉಪಬಂಧಗಳು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು, ಸದರಿ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಮಾಡಿದ ಅಂಥ ಪೂರೈಕೆಗಳ ಮೇಲೆ ಏಕೀಕೃತ ತೆರಿಗೆಯನ್ನು ವಿಧಿಸುವುದಕ್ಕೆ ಮತ್ತು ಅದನ್ನು ಸಂಗ್ರಹಿಸುವುದಕ್ಕೆ ಸಂಬಂಧಪಟ್ಟಂತೆ ಹೇಗೆ ಅನ್ವಯವಾಗುತ್ತವೆಯೋ, ಹಾಗೆಯೇ ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಹಾಗೆ ಮಾಡಿದ ಸರಕುಗಳ ಮತ್ತು ಸೇವೆಗಳ ಪೂರೈಕೆ ಮೇಲೆ ಪ್ರಕರಣ 8ರ ಮೇರೆಗೆ ವಿಧಿಸಬಹುದಾದ ಉಪಕರವನ್ನು ವಿಧಿಸುವುದಕ್ಕೆ ಮತ್ತು ಸಂಗ್ರಹಿಸುವುದಕ್ಕೆ ಸಂಬಂಧದಲ್ಲಿಯೂ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು:

ಪರಂತು, ಪ್ರಕರಣ 8ರ ಮೇರೆಗೆ ವಿಧಿಸಬಹುದಾದ ಸರಕುಗಳು ಮತ್ತು ಸೇವೆಗಳ ಪೂರೈಕೆ ಮೇಲಿನ ಉಪಕರಕ್ಕೆ ಸಂಬಂಧಪಟ್ಟಂತೆ, ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ನ್ನು, ಸದರಿ ಪ್ರಕರಣದ ಮೇರೆಗೆ ವಿಧಿಸಬಹುದಾದ ಸರಕುಗಳ ಮತ್ತು ಸೇವೆಗಳ ಪೂರೈಕೆ ಮೇಲೆ ಸದರಿ ಉಪಕರವು ಸಂದಾಯವಾಗುವವರೆಗೆ ಮಾತ್ರ ಬಳಸಿಕೊಳ್ಳತಕ್ಕದ್ದು.

**12. ನಿಯಮಗಳನ್ನು ರಚಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು, ಪರಿಷತ್ತು ಶಿಫಾರಸ್ಸನ್ನು ಮಾಡಿದಾಗ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸತಕ್ಕದ್ದು.

(2) ವಿಶೇಷವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳಲ್ಲಿ ಈ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯಗಳಿಗಾಗಿ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) ಸಂವಿಧಾನದ 279ಎ ಅನುಚ್ಛೇದದ (4)ನೇ ಖಂಡದ (ಜಿ) ಉಪಖಂಡದಲ್ಲಿ ಹೇಳಿರುವ ರಾಜ್ಯಗಳ ಒಟ್ಟು ಆಧಾರ ವರ್ಷದ ರಾಜಸ್ವದಲ್ಲಿ ಪ್ರಕರಣ 5ರ ಉಪಪ್ರಕರಣ (3)ರ ಮೇರೆಗೆ ಸೇರಿಸಿದ್ದ ಷರತ್ತುಗಳು;

(ಬಿ) ಸಂಬಂಧಪಟ್ಟ ರಾಜ್ಯದ ಸಂಚಿತ ನಿಧಿಗೆ ಜಮೆ ಮಾಡದಿರುವ ರಾಜಸ್ವಗಳ ಯಾವುದೇ ಭಾಗವನ್ನು ಯಾವ ಷರತ್ತುಗಳಿಗೆ ಒಳಪಟ್ಟು ಪ್ರಕರಣ 5ರ ಉಪಪ್ರಕರಣ (6)ರ ಮೇರೆಗೆ, ರಾಜ್ಯದ ಒಟ್ಟು ಆಧಾರ ವರ್ಷದ ರಾಜಸ್ವದಲ್ಲಿ ಸೇರಿಸಬೇಕಾಗುತ್ತದೋ ಆ ಷರತ್ತುಗಳು;

(ಸಿ) ಪ್ರಕರಣ 7ರ ಉಪಪ್ರಕರಣ (6)ರ ಮೇರೆಗೆ ಕೇಂದ್ರ ಸರ್ಕಾರಕ್ಕೆ ರಾಜ್ಯಗಳು ನಷ್ಟಪರಿಹಾರ ಮರುಪಾವತಿ ಮಾಡುವ ರೀತಿ;

(ಡಿ) ಪ್ರಕರಣ 8ರ ಉಪಪ್ರಕರಣ (1)ರ ಮೇರೆಗೆ ಉಪಕರವನ್ನು ವಿಧಿಸುವ ಮತ್ತು ಸಂಗ್ರಹಿಸುವ ರೀತಿ ಮತ್ತು ಸದರಿ ಉಪಕರವನ್ನು ಯಾವ ಅವಧಿಗೆ ವಿಧಿಸಬೇಕಾಗುತ್ತದೋ ಆ ಅವಧಿ;

(ಇ) ಪ್ರಕರಣ 9ರ ಉಪಪ್ರಕರಣ (1)ರ ಮೇರೆಗೆ ಉಪಕರ ಸಂದಾಯ ಮಾಡುವ ವಿವರಗಳ ಸಲ್ಲಿಕೆಯ ಮತ್ತು ಉಪಕರದ ಮರುಪಾವತಿಯ ಬಗೆಗಿನ ರೀತಿ ಮತ್ತು ನಮೂನೆಗಳು; ಮತ್ತು

(ಎಫ್) ನಿಯಮಗಳ ಮೂಲಕ ಯಾವ ಇತರ ವಿಷಯವನ್ನು ನಿಯಮಿಸಬೇಕಾಗಿದೆಯೋ ಅಥವಾ ನಿಯಮಿಸಬಹುದಾಗಿದೆಯೋ ಸಂಬಂಧಿಸಿದಂತೆ ಉಪಬಂಧವನ್ನು ಕಲ್ಪಿಸಬೇಕಾಗಿದೆಯೋ ಆ ಯಾವುದೇ ಇತರ ವಿಷಯ.

**13. ನಿಯಮಗಳನ್ನು ಸಂಸತ್ತಿನ ಮುಂದೆ ಇಡುವುದು.–** ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯದ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ, ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**14. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಾಗ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ಪರಿಷತ್ತು ಶಿಫಾರಸ್ಸುಗಳನ್ನು ಮಾಡಿದಾಗ ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ಅಂಥ ತೊಂದರೆಯನ್ನು ನಿವಾರಿಸುವುದಕ್ಕಾಗಿ ಅವಶ್ಯಕವೆಂದು ಅಥವಾ ವಿಹಿತವೆಂದು ಕಂಡುಬರುವಂಥ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದಿಂದ ಐದು ವರ್ಷಗಳು ಮುಕ್ತಾಯವಾದ ನಂತರ ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ, ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

## ಅನುಸೂಚಿ

**\[8(2)ನೇ ಪ್ರಕರಣವನ್ನು ನೋಡಿ\]**

1. ಈ ಅನುಸೂಚಿಯಲ್ಲಿ, "ಜಕಾತಿ ಬಾಬ್ತು", "ಶೀರ್ಷಿಕೆ, "ಉಪಶೀರ್ಷಿಕೆ" ಮತ್ತು "ಅಧ್ಯಾಯ" ಪದಗಳಿಗೆ ಮಾಡಿದ ಉಲ್ಲೇಖಕ್ಕೆ ಅವು ಬರುವ ಕಡೆಗಳಲ್ಲೆಲ್ಲಾ, ಸೀಮಾಸುಂಕಗಳ ದರ ಅಧಿನಿಯಮ, 1975 (1975ರ 51)ರ ಮೊದಲನೇ ಅನುಸೂಚಿಯಲ್ಲಿ ಅನುಕ್ರಮವಾಗಿ ಕೊಟ್ಟಿರುವ ಜಕಾತಿ ಬಾಬ್ತು, ಶೀರ್ಷಿಕೆ, ಉಪಶೀರ್ಷಿಕೆ ಮತ್ತು ಅಧ್ಯಾಯ ಎಂಬ ಅರ್ಥವೇ ಅನುಕ್ರಮವಾಗಿ ಇರತಕ್ಕದ್ದು.

2. ಸೀಮಾಸುಂಕಗಳ ದರ ಅಧಿನಿಯಮ, 1975 (1975ರ 51)ರ ಮೊದಲನೇ ಅನುಸೂಚಿಯ ಅರ್ಥಾನ್ವಯದ ನಿಯಮಗಳು, ಮೊದಲನೆ ಅನುಸೂಚಿಯ ಪ್ರಕರಣ ಮತ್ತು ಅಧ್ಯಾಯ ಟಿಪ್ಪಣಿಗಳು ಮತ್ತು ಸಾಮಾನ್ಯ ವಿವರಣಾತ್ಮಕ ಟಿಪ್ಪಣಿಗಳು ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಈ ಅನುಸೂಚಿಯ ಅರ್ಥವಿವರಣೆಗೂ ಅನ್ವಯವಾಗತಕ್ಕದ್ದು.

| ಕ್ರಮ ಸಂಖ್ಯೆ | ಸರಕುಗಳು ಅಥವಾ ಸೇವೆಗಳ ಪೂರೈಕೆ ವರ್ಣನೆ | ಜಕಾತಿ ಬಾಬ್ತು, ಶೀರ್ಷಿಕೆ, ಉಪಶೀರ್ಷಿಕೆ, ಅಧ್ಯಾಯ ಅಥವಾ ಸಂದರ್ಭಾನುಸಾರ ಸರಕುಗಳು ಅಥವಾ ಸೇವೆಗಳ ಪೂರೈಕೆ | ಸರಕುಗಳು ಮತ್ತು ಸೇವೆಗಳ ತೆರಿಗೆಯ ನಷ್ಟಪರಿಹಾರ ಉಪಕರವನ್ನು ಯಾವ ಗರಿಷ್ಠ ದರದಲ್ಲಿ ಸಂಗ್ರಹಿಸಬಹುದಾಗಿದೆಯೋ ಆ ಗರಿಷ್ಠ ದರ |
|---|---|---|---|
| (1) | (2) | (3) | (4) |
| 1. | ಪಾನ್ ಮಸಾಲ | 2106 90 20 | ಶೇ. ಒಂದು ನೂರ ಮೂವತ್ತೈದರಷ್ಟು, ಮೌಲ್ಯಾನುಸಾರ |
| 2. | ತಂಬಾಕು ಉತ್ಪನ್ನಗಳನ್ನೊಳಗೊಂಡಂತೆ ತಂಬಾಕು ಮತ್ತು ತಯಾರಿಸಿದ ಬದಲಿ ತಂಬಾಕುಗಳು | 24 | ಆದರೆ, ಒಂದು ಸಾವಿರ ಸ್ಟಿಕ್ ಗಳಿಗೆ ನಾಲ್ಕು ಸಾವಿರದ ಒಂದು ನೂರ ಎಪ್ಪತ್ತು ರೂಪಾಯಿಗಳು. ಮೌಲ್ಯಾನುಸಾರ, ಆದರೆ ಒಂದು ಸಾವಿರ ಸ್ಟಿಕ್ ಗಳಿಗೆ ನಾಲ್ಕು ಸಾವಿರದ ನೂರಾ ಎಪ್ಪತ್ತು ರೂಪಾಯಿಗಳು ಅಥವಾ ಮೌಲ್ಯಾನುಸಾರ ಶೇ. ಇನ್ನೂರ ತೊಂಬತ್ತು ಮೌಲ್ಯಾನುಸಾರ ಅಥವಾ ಅದರ ಸಂಯೋಜನೆ ಶೇ ನೂರಾ ಎಪ್ಪತ್ತನ್ನು ಮೀರಬಾರದು. |
| 3. | ಕಲ್ಲಿದ್ದಲು, ಕಲ್ಲಿದ್ದಲ ಇಟ್ಟಿಗೆ, ಓವಾಯಿಡ್‌ಗಳು ಮತ್ತು ಕಲ್ಲಿದ್ದಲು, | 2701, 2702 ಅಥವಾ 2703 | ಒಂದು ಟನ್ ಪ್ರಮಾಣಕ್ಕೆ ನಾಲ್ಕು ನೂರು ರೂಪಾಯಿಗಳು |

| | | | |
|---|---|---|---|
| | ಲಿಗ್ನೈಟ್‌ನಿಂದ ತಯಾರಿಸಿದ ಅಂಥದೇ ಘನ ಇಂಧನಗಳು. ಇವು ಒಟ್ಟುಗೂಡಿರಲಿ ಅಥವಾ ಇಲ್ಲದಿರಲಿ ಹಾಗೂ ಜೆಟ್, ಸಸ್ಯದ ಇದ್ದಿಲನ್ನು ಪೀಟ್ ಹೊರತುಪಡಿಸಿ (ಪೀಟ್ ಲಿಟ್ಟರ್ ಒಳಗೊಂಡಂತೆ) ಒಟ್ಟುಗೂಡಿರಲಿ ಅಥವಾ ಇಲ್ಲದಿರಲಿ | | |
| 4. | ಅನಿಲಗೂಡಿಸಿದ ಪಾನೀಯಗಳು | 2202 10 10 | ಶೇ. ಹದಿನೈದರಷ್ಟು ಮೌಲ್ಯಾನುಸಾರ |
| 4ಎ. | ಚಾಲಕನನ್ನು ಒಳಗೊಂಡಂತೆ ಹದಿಮೂರು ವ್ಯಕ್ತಿಗಳಿಗಿಂತ ಹೆಚ್ಚಿಗೆ ಇರದ ವ್ಯಕ್ತಿಗಳ ಸಾಗಣೆಯ ಮೋಟಾರು ವಾಹನಗಳು | 8702 10,<br>8702 20,<br>8702 30 ಅಥವಾ<br>8702 90, | ಶೇಕಡಾ ಇಪ್ಪತ್ತೈದರಷ್ಟು ಮೌಲ್ಯಾನುಸಾರ |
| 5. | ಸ್ಟೇಷನ್ ವಾಗನ್‌ಗಳು ಮತ್ತು ರೇಸಿಂಗ್ ಕಾರುಗಳನ್ನೊಳಗೊಂಡಂತೆ, ಜನರ ಸಾಗಣೆಗಾಗಿಯೇ ಪ್ರಮುಖವಾಗಿ ವಿನ್ಯಾಸಗೊಳಿಸಿದ ಮೋಟಾರು ಕಾರುಗಳು ಮತ್ತು ಇತರೆ ಮೋಟಾರು ವಾಹನಗಳು.<br>(ಚಾಲಕನನ್ನೊಳಗೊಂಡಂತೆ) ಹತ್ತು ಅಥವಾ ಅದಕ್ಕಿಂತ ಹೆಚ್ಚು ಜನರ ಸಾಗಣೆಗಾಗಿ ತಯಾರಿಸಿದ ಮೋಟಾರು ವಾಹನಗಳನ್ನು ಹೊರತುಪಡಿಸಿ) | 8703 | ಶೇ. ಇಪ್ಪತ್ತೈದರಷ್ಟು ಮೌಲ್ಯಾನುಸಾರ |
| 6. | ಇತರೆ ಯಾವುದೇ ಪೂರೈಕೆಗಳು | | ಶೇ. ಹದಿನೈದರಷ್ಟು ಮೌಲ್ಯಾನುಸಾರ |